O.S.No. 304/17
PW1

**ದಿನಾಂಕ 6.6.2019 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿ ಪರ ಶ್ರೀ ಆರ್‌ಜೆಡಿ ವಕೀಲರಿಂದ ಃ**

ದಾವಾ ಸೊತ್ತು ನನಗೆ ಭೂ ನ್ಯಾಯ ಮಂಡಳಿಯ ಆದೇಶದಂತೆ ಬಂದಿರುತ್ತದೆ. ಭೂ ನ್ಯಾಯ ಮಂಡಳಿಯಲ್ಲಿ ಆದೇಶವಾಗುವಾಗ ದಾವಾ ಸೊತ್ತಿನ ಸರ್ವೆ ನಂಬರ್ ಮಾತ್ರ ಇರುತ್ತದೆ. ನಾನು ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ ಕೊಡುವ ಸಮಯದಲ್ಲಿ ಅನಂತರಾಮ ಮೂಡಣ್ಣಯ್ಯರವರು ಭೂ ಮಾಲೀಕರಾಗಿದ್ದರು. ಭೂ ನ್ಯಾಯ ಮಂಡಳಿ ಆದೇಶದ ಪ್ರಕಾರ ನನ್ನ ಹೆಸರಿಗೆ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಾಗಿಲ್ಲ ಎಂದು 2012-13ರಲ್ಲಿ ನನಗೆ ಗೊತ್ತಾಯಿತು. ನಂತರ ನಾನು ಪಹಣಿ ದಾಖಲಿಸುವ ಬಗ್ಗೆ ತಾಲೂಕು ಕಚೇರಿಗೆ ಹೋಗಿ ಅರ್ಜಿ ಕೊಟ್ಟಿರಬಹುದು ಆದರೆ ನನಗೆ ಸರಿಯಾಗಿ ನೆನಪಿಲ್ಲ. ನಾನು ತಾಲೂಕು ಕಚೇರಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ಕೊಟ್ಟಿರುವ ವಿಚಾರವಾಗಿ ತಾಲೂಕು ಕಚೇರಿಯವರು ಯಾವುದೇ ಹಿಂಬರಹ ನೀಡಿಲ್ಲ. ಹಿಂಬರಹ ನೀಡಿಲ್ಲವೆಂದು ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ.

ನನ್ನ ಮುಖ್ಯ ವಿಚಾರಣೆಯ 2ನೇ ಖಂಡಿಕೆಯಲ್ಲಿ ಸ.ನಂಃ 98ಃ4ಪಿ3 (98ಃ4ಪಿ4) ಎಂದು ನಾನು ಸ್ವತಃ ನಮೂದಿಸಿದ್ದೇನೆ. ನಿಪಿ2ರಲ್ಲಿ ಸ.ನಂಃ 98ಃ4(ಪಿ4) ಎಂದು ಬರೆಯಲಾಗಿದೆ ಎಂದರೆ ಸರಿ. ನನ್ನ ಭೂ ಮಾಲಿಕರಾದ ಅನಂತರಾಮ ಮೂಡಣ್ಣಯ್ಯರವರಿಗೆ 98ಃ4ರಲ್ಲಿ ಎಷ್ಟು ಜಮೀನು ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ 2ನೇ ಖಂಡಿಕೆಯಲ್ಲಿ ಹೇಳಿರುವಂತೆ ಪ್ರತಿವಾದಿಗಳು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿದ್ದಾರೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ತೀರ್ಪು (judgement) ಇದೆ ಎಂದು ನುಡಿಯುತ್ತಾರೆ. ಸದರಿ ತೀರ್ಪಿನಲ್ಲಿ ಆ ರೀತಿ ಶಾಮೀಲಾಗಿದ್ದರೆಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಕಂದಾಯ ಇಲಾಖೆಯವರು ನನ್ನ ಹೆಸರಿಗೆ ಪಹಣಿಯನ್ನು ನಮೂದಿಸಲು ಸಾಧ್ಯವಾಗುತ್ತಿಲ್ಲ ಎಂದು ಹಿಂಬರಹ ನೀಡಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿದ್ದೆ

ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನನ್ನು ಸರ್ಕಾರಿ ಮೋಜಣಿದಾರರಿಂದ ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರಿನಲ್ಲಿ ಇದ್ದರೆ ಮಾತ್ರ ಅಳತೆ ಮಾಡುತ್ತಾರೆ ಎಂದು ನುಡಿಯುತ್ತಾರೆ.

2003ರಲ್ಲಿ ನಿಪಿ3ರಂತೆ ಫಾರಂ ನಂ: 10 ನಮೂದಾದ ನಂತರ 2013ರವರೆಗೆ ಪಹಣಿಯಲ್ಲಿ ನನ್ನ ಹೆಸರನ್ನು ನಮೂದಿಸುವುದಕ್ಕೆ ಯಾವುದಾದರೂ ಕಾರಣ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು 2011ರಲ್ಲಿ ನನ್ನ ಕಾಲಿಗೆ ಅಪಘಾತವಾಗಿದ್ದರಿಂದ ವಿಚಾರಿಸಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ನಿಪಿ2ರಲ್ಲಿ ನಮೂದಿಸಿರುವ ಜಮೀನುಗಳು ಮತ್ತು ನಿಪಿ4ರಲ್ಲಿ ನಮೂದಿಸಿರುವ ಜಮೀನುಗಳು ಬೇರೆ ಬೇರೆ ಎಂದರೆ ಸರಿಯಲ್ಲ.

ಕಂದಾಯ ಇಲಾಖೆಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಮಾಡಿದರೆ ನನ್ನ ಸುಳ್ಳು ಬಯಲಾಗುತ್ತದೆ ಎಂದು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಗೆ ನನ್ನ ಹೆಸರನ್ನು ಪಹಣಿಗೆ ನಮೂದಿಸಲು ಯಾವತ್ತೂ ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಬರೆಸಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ದಾಖಲಿಸಲು ನನಗೆ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಭೂ ನ್ಯಾಯ ಮಂಡಳಿಯ ಆದೇಶದ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವಂತೆ ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**(ಸಾ.ಓ.ಹೇ.ಕೆ.ಸ.ಇ.ಎ.ಒ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬೆಳ್ತಂಗಡಿ